<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.81/2018. DW.-1.**

ದಿನಾಂಕಃ**20.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u> ವಾದಿಯರ ಪರ ಶ್ರೀ ವೈ ಟಿ ಎಂ ವಕೀಲರಿಂದಃ-

ದಾವೆಯ ವಿಚಾರಗಳು ನನಗೆ ಗೊತ್ತು. ಈ ದಾವೆಯನ್ನು ಯಾರು ಯಾರ ಮೇಲೆ ಏನು ಪರಿಹಾರ ಕೋರಿ ಸಲ್ಲಿಸಿದ್ದಾರೆಂದು ಗೊತ್ತು. ನಾನು ಓಬಾಳಪ್ಪನನ್ನು ನೋಡಿರುತ್ತೇನೆ. ಕ್ರಯ ಮಾಡಿದ ಸಮಯದಲ್ಲಿ ಓಬಾಳಪ್ಪನಿಗೆ ಸುಮಾರು 79 ವರ್ಷ ವಯಸ್ಸಾಗಿತ್ತು. ಓಬಾಳಪ್ಪನಿಗೆ ಎಷ್ಟು ಜನ ಮಕ್ಕಳು ಎಂದು ನಿಮಗೆ ಗೊತ್ತೇ ಎಂದರೆ ಸಾಕ್ಷಿಯು ಒಬ್ಬಳೇ ಹೆಣ್ಣು ಮಗಳು ನಮಗೆ ತಿಳಿಸಿದ್ದರು. ದಾವಾ ಸ್ವತ್ತನ್ನು ಕ್ರಯಕ್ಕೆ ಖರೀದಿಸಿದಾಗ ಓಬಾಳಪ್ಪ ರವರ ಕುಟುಂಬದ ವಂಶ ವೃಕ್ಷ ನೋಡಿರುವುದಿಲ್ಲ. ದಾವಾ ಸ್ವತ್ತು ಓಬಾಳಪ್ಪ ರವರಿಗೆ ಸರ್ಕಾರದಿಂದ ಮಂಜೂರಾಗಿದ್ದ ವಿಚಾರ ನನಗೆ ಗೊತ್ತಿತ್ತು. ದಾವಾ ಸ್ವತ್ತನ್ನು ಹೊರತು ಪಡಿಸಿ ಓಬಾಳಪ್ಪ ರವರಿಗೆ ಬೇರೆ ಸ್ವತ್ತುಗಳು ಇರಲಿಲ್ಲವೆಂದರೆ ಸರಿಯಲ್ಲ, ಅವರಿಗೆ ಒಂದು ಮನೆ ಇತ್ತು. ಓಬಾಳಪ್ಪರವರಿಗೆ ಮಗನಿರುವ ವಿಚಾರ ಈ ದಾವೆಯ ಸಮನ್ಸ್ ಬಂದ ನಂತರದಲ್ಲಿ ಗೊತ್ತಾಗಿರುತ್ತದೆ.

ದಾವಾ ಸ್ವತ್ತಿನ ಕ್ರಯಪತ್ರ ಮಾಡಿಕೊಡುವಾಗ ಓಬಾಳಪ್ಪ, ಓಬಾಳಪ್ಪರವರ ಮೊದಲನೇ ಹೆಂಡತಿ ರಂಗಮ್ಮ, ಎರಡನೇ ಹೆಂಡತಿ ಜಯಮ್ಮ ಮತ್ತು ಮಗಳು ರೇಣುಕಮ್ಮ ರವರು ಹಾಜರು ಇದ್ದರು. ರೇಣುಕಮ್ಮ ರವರು ಓಬಾಳಪ್ಪ ರವರ ಮಗಳು ಎಂಬ ಬಗ್ಗೆ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ, ಆದರೆ ಓಬಾಳಪ್ಪ ರವರೇ ಮಗಳು ಎಂದು ಕರೆಸಿದ್ದರು ಹಾಗೂ ರಂಗಮ್ಮ ರವರು ಹಳೆಯ ವಂಶವೃಕ್ಷದ ದಾಖಲೆ ತೋರಿಸಿದ್ದರು. ಸದರಿ ವಂಶವೃಕ್ಷ ನಮ್ಮ ಬಳಿ ಇರುತ್ತದೆ. ನನ್ನ ಬಳಿ ಇದೆ ಎಂದು ಹೇಳುವ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಆ ಅವಧಿಯಲ್ಲಿ ನಮ್ಮ ಬಳಿ ಇದ್ದ ಸದರಿ ವಂಶವೃಕ್ಷವನ್ನು ಹುಡುಕಿನೋಡಬೇಕು, ಸಿಕ್ಕರೆ ಹಾಜರುಪಡಿಸುತ್ತೇನೆ. ನಾನು ಯಾವುದೇ ವಂಶವೃಕ್ಷ ನೋಡಿಲ್ಲ ಮತ್ತು ದಾಖಲೆ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಮಗೆ ಓಬಾಳಪ್ಪ ರವರಿಗೆ ಮಗನಿರುವ

ವಿಚಾರಗಳು ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಮೋಸ ಮಾಡಿ 1, 2, 3, 5 ನೇ ಪ್ರತಿವಾದಿಗಳಿಂದ ಕ್ರಯಪತ್ರ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಕ್ರಯಪತ್ರ ಮಾಡಿಕೊಟ್ಟ ಸಮಯದಲ್ಲಿ ರಂಗಮ್ಮರವರಿಗೆ ಸು.48 ರಿಂದ 50 ವರ್ಷ ವಯಸ್ಸಾಗಿರಬಹುದು, ಅದೇ ರೀತಿ ಕ್ರಯಪತ್ರ ಮಾಡಿಕೊಟ್ಟ ಸಮಯದಲ್ಲಿ 3 ನೇ ಪ್ರತಿವಾದಿಗೆ ಸು.50 ವರ್ಷ ವಯಸ್ಸಾಗಿರಬಹುದು. ನಿಡಿ1 ರಲ್ಲಿ ರಂಗಮ್ಮರವರ ವಯಸ್ಸು 65 ವರ್ಷ ಎಂದು ಹಾಗೂ 3 ನೇ ಪ್ರತಿವಾದಿಯ ವಯಸ್ಸು 60 ವರ್ಷ ಎಂದು ಬರೆಯಲಾಗಿದೆ ಎಂದರೆ ಸರಿ. ನಿಡಿ 1 ರಲ್ಲಿ ಓಬಾಳಪ್ಪ ರವರ ವಿಳಾಸ ಎಮ್ಮೆದೊಡ್ಡಿ ರಸ್ತೆ ಸುಭಾಶ್ ನಗರ, ಕಡೂರು ಎಂದು ನಮೂದು ಇದೆ ಎಂದರೆ ಸರಿ. ಅದೇ ರೀತಿ ರಂಗಮ್ಮ ರವರ ವಿಳಾಸ ಮಧುಗಿರಿ, ತುಮಕೂರು ಜಿಲ್ಲೆ ಎಂದು ಬರೆಸಿರುತ್ತೇವೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅವರ ಮಗಳ ಜೊತೆ ವಾಸವಿದ್ದಾರೆ ಎಂದು ಬರೆಸಿರುತ್ತೇವೆ. ಅದೇ ರೀತಿ ರೇಣುಕಮ್ಮ ರವರ ವಿಳಾಸ ಪಿ.ಕೊತ್ತಪಲ್ಲಿ, ಅನಂತಪುರ ತಾಲ್ಲೂಕು, ಆಂದ್ರಪ್ರದೇಶ ಎಂದು ಬರೆಯಲಾಗಿದೆ ಎಂದರೆ ಸರಿ.

ಓಬಾಳಪ್ಪ ರವರಿಗೆ ಇಬ್ಬರು ಪತ್ನಿಯರು ಹಾಗೂ ಒಬ್ಬನೇ ಮಗ ವಾದಿ ಹಾಗೂ ಯಾವುದೇ ಮಗಳು ಇಲ್ಲ ಎಂದರೆ ಸರಿಯಲ್ಲ. ರೇಣುಕಮ್ಮ ರವರು ಓಬಾಳಪ್ಪ ರವರ ಮಗಳಲ್ಲ ಮತ್ತು ಅವರ ಕುಟುಂಬಕ್ಕೆ ಸಂಬಂಧಪಟ್ಟವರಲ್ಲ ಎಂದರೆ ಸರಿಯಲ್ಲ. ಓಬಾಳಪ್ಪನಿಗೆ ನಾವು ಕ್ರಯಮಾಡಿಸಿಕೊಂಡ ಸಮಯದಲ್ಲಿ ಸುಮಾರು 80-82 ವರ್ಷ ವಯಸ್ಸಾಗಿತ್ತು, ಅವರಿಗೆ ಬುದ್ಧಿ ಸರಿ ಇರಲಿಲ್ಲ, ಅನಾರೋಗ್ಯವಿತ್ತು ಮತ್ತು 2, 3 ನೇ ಪ್ರತಿವಾದಿಗೆ ವಿದ್ಯಾಭ್ಯಾಸ ಇಲ್ಲ ಹಾಗೂ ಯಾವುದೇ ಜ್ಞಾನ ಇರಲಿಲ್ಲ ಇದನ್ನು ದುರುಪಯೋಗಪಡಿಸಿಕೊಂಡು ನಾವು ಕ್ರಯ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ತಂದೆ ಪೊಲೀಸ್ ಆಗಿದ್ದರು ಎಂದರೆ ಸರಿ. ದಾವಾ ಸ್ವತ್ತನ್ನು ಕ್ರಯ ಮಾಡಿಸಿಕೊಳ್ಳುವಾಗ ನನ್ನ ತಂದೆ ಕರ್ತವ್ಯದಲ್ಲಿ ಇದ್ದರು. ನಾವು ನಮ್ಮ ಊರಿಗೆ ಹೋಗುವಾಗ ನನ್ನ ತಂದೆ ದಾವಾ ಸ್ವತ್ತಿನ ರಸ್ತೆಯಲ್ಲಿಯೇ ಓಡಾಡುತ್ತಿದ್ದರು ಎಂದರೆ ಸರಿಯಲ್ಲ, ನಾವು ಪೊಲೀಸ್ ವಸತಿಗೃಹದಲ್ಲಿ ವಾಸವಾಗಿದ್ದೆವು.

ದಾವಾ ಸ್ವತ್ತು ಪೊಲೀಸ್ ವಸತಿಗೃಹಕ್ಕೆ ಹತ್ತಿರದಲ್ಲಿ ಇದೆ ಎಂದರೆ ಸರಿ, ಅಂದರೆ

ಸು.200 ಮೀ ಅಂತರವಿದೆ. ಓಬಾಳಪ್ಪ ರವರಿಗೆ ಇದೆ ಎಂದ ಹೇಳುವ ಮನೆಯು ದಾವಾ ಸ್ವತ್ತಿನಿಂದ 2 ಕಿ ಮೀ ದೂರದಲ್ಲಿ ಇತ್ತು. ನನ್ನ ತಂದೆ ಪೊಲೀಸ್ ಆಗಿದ್ದ ಕಾರಣ ಹಾಗೂ 1 ರಿಂದ 3 ನೇ ಪ್ರತಿವಾದಿಗಳು ಅನಕ್ಷರಸ್ಥರಾದ ಕಾರಣ ನನ್ನ ತಂದೆಯು 1 ರಿಂದ 3 ನೇ ಪ್ರತಿವಾದಿಗಳಿಗೆ ವೃದ್ಧಾಪ್ಯವೇತನ ಮಾಡಿಸಿಕೊಡುತ್ತೇನೆ ಎಂದು ಹೇಳಿ ಕ್ರಯಪತ್ರ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ಖರೀದಿ ಮಾಡಿದ ಎಷ್ಟು ವರ್ಷಗಳ ನಂತರ ಓಬಾಳಪ್ಪ ಮೃತಪಟ್ಟರು ಎಂದರೆ ಸು.4 ವರ್ಷಗಳ ನಂತರ ಮೃತಪಟ್ಟಿರುತ್ತಾರೆ. ಕ್ರಯಪತ್ರವಾದ ದಿನಾಂಕದ ಅವಧಿಯಲ್ಲಿ ಓಬಾಳಪ್ಪರವರು ಓಡಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲವೆಂದರೆ ಸರಿ, ಸಾಕ್ಷಿ ಮುಂದುವರೆದು ಅವರು ಕುಂಟರಾಗಿದ್ದರು. ಕ್ರಯಪತ್ರವನ್ನು ನಾವು ಮಾಡಿಸಿಕೊಂಡಿರುವ ವಿಚಾರ ವಾದಿಗೆ ಗೊತ್ತಾದ ನಂತರ ಅವರು ಪುರಸಭೆಗೆ ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ದಾಖಲಾದ ನಂತರದಲ್ಲಿ ವಾದಿಯು ಖಾತೆ ಮಾಡದಂತೆ ಅರ್ಜಿ ನೀಡಿದ್ದರು ಸಹಃ ನಾವು ಪ್ರಭಾವ ಬೀರಿಸಿ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಾನು ಸಿವಿಲ್ ಎಂ.ಟೆಕ್ ಓದಿದ್ದೇನೆ. ನನ್ನ ತಂದೆ ಮಾಡುತ್ತಿದ್ದ ವ್ಯವಹಾರಗಳ ಬಗ್ಗೆ ನನಗೆ ಗೊತ್ತು. ಕ್ರಯಪತ್ರವಾದ ದಿನ ನಾನು ಹಾಜರು ಇರಲಿಲ್ಲ, ನನ್ನ ತಂದೆ ಇದ್ದರು. ಕ್ರಯಪತ್ರದಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ನಂತರದಲ್ಲಿ ನಾನು ಓದಿ ತಿಳಿದುಕೊಂಡಿರುತ್ತೇನೆ. ನೊಂದಣಿಯಾದ ದಿನ ನಾನು ಈ ದಿನ ಇರದಿದ್ದ ಕಾರಣ ಆ ದಿನ ಅದರಲ್ಲಿ ನಮೂದು ಮಾಡಿದ್ದ ವಿಚಾರಗಳು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ನನಗೆ ಕ್ರಯಪತ್ರದ ದಿನ ನಡೆದ ವ್ಯವಹಾರದ ಎಲ್ಲಾ ಮಾಹಿತಿಗಳು ಇಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಕ್ರಯದ ವ್ಯವಹಾರವು ಎಷ್ಟು ಮೊತ್ತಕ್ಕೆ ನಡೆದಿರುತ್ತದೆ ಸಾಕ್ಷಿಯು ರೂ.8 ಲಕ್ಷ ಚಿಲ್ಲರೆ ಮೊತ್ತಕ್ಕೆ ವ್ಯವಹಾರವಾಗಿತ್ತು ಎಂದು ನನಗೆ ತಿಳಿದುಬಂದಿರುತ್ತದೆ. ಸದರಿ ರೂ.8 ಲಕ್ಷ ಹಣದ ಪೈಕಿ ರೂ.4 ಲಕ್ಷ ವನ್ನು ಚೆಕ್ ಮೂಲಕ ನೀಡಲಾಗಿದೆ ಎಂದು ತಿಳಿದಿರುತ್ತದೆ, ಉಳಿದ ಹಣವನ್ನು ನಗಧು ರೂಪದಲ್ಲಿ ನೀಡಲಾಗಿರುತ್ತದೆ ಎಂದು ತಿಳಿದುಬಂದಿರುತ್ತದೆ. ಹಣವನ್ನು ನೀಡುವಾಗ ಓಬಾಳಪ್ಪ, ಅವರ ಇಬ್ಬರು ಪತ್ನಿಯರು

ಮತ್ತು ಮಗಳು ಮತ್ತು ಅವರ ಪಕ್ಕದ ಮನೆಯ ಮಂಜಣ್ಣ ರವರು ಇದ್ದರು ಎಂದು ನನಗೆ ಗೊತ್ತಾಗಿರುತ್ತದೆ. ರೂ.4 ಲಕ್ಷದ ಚೆಕ್ ಅನ್ನು ನನ್ನ ತಂದೆಯ ಬ್ಯಾಂಕ್ ಖಾತೆಯಿಂದ ನೀಡಿರುತ್ತೇವೆ, ನಿಖರವಾಗಿ ಯಾವ ಬ್ಯಾಂಕಿನ ಖಾತೆ ಎಂದು ಗೊತ್ತಿಲ್ಲ, ಎಸ್ ಬಿ ಐ ಖಾತೆಯಿಂದ ಚೆಕ್ ನೀಡಿದ್ದಾರೆ. ಆದರೆ ಸದರಿ ಚೆಕ್ ಸಂಖ್ಯೆ ಮತ್ತು ಸದರಿ ಚೆಕ್ ನಲ್ಲಿ ನಮೂದು ಮಾಡಿದ್ದ ದಿನಾಂಕ ನನಗೆ ನೆನಪಿಲ್ಲ. ನನಗೆ ಈ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆ ವ್ಯವಹಾರದ ಸಮಯದಲ್ಲಿ ನಾನು ಎಂ.ಟೆಕ್ ಓದುತ್ತಿದ್ದೆ, ನನಗೆ ತಿಳಿದಿರುವಷ್ಟು ಹೇಳಬಹುದು.

ಹಣ ಕೊಡುವಾಗ ಹಾಜರು ಇದ್ದರು ಎಂದು ಹೇಳಿದ ಮಂಜಣ್ಣ ರವರನ್ನು ಸಾಕ್ಷಿಯಾಗಿ ಮಾಡಿಸಲು ನನಗೆ ತೊಂದರೆ ಇಲ್ಲ. ದಾವಾ ಸ್ವತ್ತು ಖರೀದಿಯ ಮಾತುಕತೆಯು ಓಬಾಳಪ್ಪ ರವರ ಮನೆಯಲ್ಲಿ ಆಗಿರುತ್ತದೆ. ಮಾತುಕತೆಯಾಗುವಾಗ ನನ್ನ ತಂದೆ, ಓಬಾಳಪ್ಪ, ಅವರ ಇಬ್ಬರು ಪತ್ನಿ ಮತ್ತು ಮಂಜಣ್ಣ ಹಾಜರು ಇದ್ದರು. ಸದರಿ ಮಾತುಕತೆಯಾದ ದಿನಾಂಕ ನನಗೆ ಗೊತ್ತಿಲ್ಲ, 2017 ರಲ್ಲಿ ಆಗಿರುತ್ತದೆ. ಮಾತುಕತೆಯಾದ ದಿನವೇ ನನ್ನ ತಂದೆ ಮುಂಗಡ ಹಣವಾಗಿ ಸ್ವಲ್ಪ ನಗಧು ಹಣ ನೀಡಿರುತ್ತಾರೆ.

ನಾವು ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಓಬಾಳಪ್ಪ ರವರಿಗೆ ಆರೋಗ್ಯ ಸರಿಇಲ್ಲದ ಕಾರಣ ಮತ್ತು ವಯಸ್ಸಾಗಿದ್ದ ಕಾರಣ ಅವರಿಗೆ ಸುಳ್ಳು ಕ್ರಯಪತ್ರ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.